# ಕರ್ನಾಟಕ ಸರ್ಕಾರದ ನಡವಳಿ

ವಿಷಯ:- ಅಧಿಕಾರಿ ವೇತನ ಸಮಿತಿಯ ರಚನೆ ಬಗ್ಗೆ.

- - -

ಆದೇಶ ಸಂಖ್ಯೆ: ಆಇ 23 ಎಸ್‌ಆರ್‌ಪಿ 2011,
ಬೆಂಗಳೂರು, ದಿನಾಂಕ: 15ನೇ ಜೂನ್ 2011

ಮಾನ್ಯ ಮುಖ್ಯಮಂತ್ರಿಗಳು 2011-12ನೇ ಸಾಲಿನ ಆಯವ್ಯಯ ಭಾಷಣದಲ್ಲಿ ರಾಜ್ಯ ಸರ್ಕಾರಿ ನೌಕರರ ಹಲವಾರು ಬೇಡಿಕೆಗಳನ್ನು ಪರಿಗಣಿಸಲು ಒಂದು ಅಧಿಕಾರಿ ವೇತನ ಸಮಿತಿಯನ್ನು ರಚಿಸಲಾಗುವುದೆಂಬ ಸರ್ಕಾರದ ತೀರ್ಮಾನವನ್ನು ಘೋಷಿಸಿದ್ದಾರೆ.

2. ಅದರಂತೆ, ಕೆಳಕಂಡ ಅಧಿಕಾರಿಗಳನ್ನೊಳಗೊಂಡ ಒಂದು ಅಧಿಕಾರಿ ವೇತನ ಸಮಿತಿಯನ್ನು ರಚಿಸಲು ಸರ್ಕಾರವು ಹರ್ಷಿಸುತ್ತದೆ:-

(1) ಶ್ರೀ ಸುಬೀರ್ ಹರಿಸಿಂಗ್, ಭಾ.ಆ.ಸೇ. — ಅಧ್ಯಕ್ಷರು
ಅಧ್ಯಕ್ಷರು,
ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ

(2) ಶ್ರೀ ಎಲ್.ವಿ.ನಾಗರಾಜನ್, ಭಾ.ಆ.ಸೇ. — ಸದಸ್ಯರು
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಆರ್ಥಿಕ ಇಲಾಖೆ

(3) ಡಾ: ಸುಭಾಷ್ ಚಂದ್ರ ಖುಂಟಿಆ, ಭಾ.ಆ.ಸೇ. — ಸದಸ್ಯರು
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಲೋಕೋಪಯೋಗಿ ಇಲಾಖೆ

(4) ಶ್ರೀ ಅನಿಲ್ ಕುಮಾರ್ ಝಾ, ಭಾ.ಆ.ಸೇ. — ಸದಸ್ಯರು
ಸರ್ಕಾರದ ಕಾರ್ಯದರ್ಶಿ (ವೆಚ್ಚ)
ಆರ್ಥಿಕ ಇಲಾಖೆ

(5) ಶ್ರೀ ಹೆಚ್.ಶಶಿಧರ್, ಭಾ.ಆ.ಸೇ. (ನಿವೃತ್ತ) — ಕಾರ್ಯದರ್ಶಿ

3. ಅಧಿಕಾರಿ ವೇತನ ಸಮಿತಿಯ ಪರಿಶೀಲನಾರ್ಹ ಅಂಶಗಳು ಈ ಕೆಳಕಂಡಂತಿವೆ:-

(i) ರಾಜ್ಯ ಸರ್ಕಾರಿ ನೌಕರರ, ಅನುದಾನಿತ ಶಿಕ್ಷಣ ಸಂಸ್ಥೆಗಳ, ಸ್ಥಳೀಯ ಸಂಸ್ಥೆಗಳ ನೌಕರರು ಹಾಗೂ ವಿಶ್ವವಿದ್ಯಾನಿಲಯಗಳ ಬೋಧಕೇತರ ಸಿಬ್ಬಂದಿಗಳ (ಯುಜಿಸಿ/ಎಐಸಿಟಿಇ/ಐಸಿಎಆರ್ ವೇತನ ಶ್ರೇಣಿ ಹೊಂದಿರುವವರನ್ನು ಹೊರತುಪಡಿಸಿ) ಪ್ರಸ್ತುತ ವೇತನ ರಚನೆಯನ್ನು ಪರಿಶೀಲಿಸಲು ಮತ್ತು ಮರಣ ಹಾಗೂ ನಿವೃತ್ತಿ ಉಪದಾನ ಸೌಲಭ್ಯಗಳನ್ನೊಳಗೊಂಡಂತೆ ಲಭ್ಯವಿರುವ ಎಲ್ಲಾ ಕ್ರೋಢೀಕೃತ ಸೌಲಭ್ಯಗಳನ್ನು ಗಣನೆಗೆ ತೆಗೆದುಕೊಂಡು ಪರಿಶೀಲಿಸುವುದು ಹಾಗೂ ಕಾರ್ಯ ಸಾಧ್ಯವಿರುವ ನೂತನ ವೇತನ ರಚನೆಯನ್ನು ಶಿಫಾರಸ್ಸು ಮಾಡುವುದು.

(ii) ರಾಜ್ಯ ಸರ್ಕಾರವು ಅಳವಡಿಸಿಕೊಂಡಿರುವ ಪ್ರಸಕ್ತ ಕೇಂದ್ರ ಸರ್ಕಾರದ ತುಟ್ಟಿಭತ್ಯೆಯ ನೀತಿಗೆ ಸಂಬಂಧಿಸಿದಂತೆ ತುಟ್ಟಿಭತ್ಯೆಯ ಸೂತ್ರವನ್ನು ಪರಿಶೀಲಿಸುವುದು ಮತ್ತು ನಿರ್ಣಯಿಸುವುದು ಹಾಗೂ ಕಾರ್ಯಸಾಧ್ಯವಿರುವ ಬದಲಾವಣೆಗಳನ್ನು ಮಾಡಲು ಸಲಹೆ ನೀಡುವುದು.

(iii) ಮನೆ ಬಾಡಿಗೆ ಭತ್ಯೆ ಮತ್ತು ನಗರ ಪರಿಹಾರ ಭತ್ಯೆ ಇತ್ಯಾದಿಗಳನ್ನೊಳಗೊಂಡಂತೆ ವಿವಿಧ ಭತ್ಯೆಗಳು ಮತ್ತು ರಜೆ ಪ್ರಯಾಣ ರಿಯಾಯಿತಿ ಮತ್ತು ವೈದ್ಯಕೀಯ ಉಪಚಾರ ಸೌಲಭ್ಯಗಳ ಪ್ರಮಾಣಗಳನ್ನು ಪರಿಶೀಲಿಸುವುದು ಹಾಗೂ ಕಾರ್ಯಸಾಧ್ಯವಿರುವ ಬದಲಾವಣೆಗಳನ್ನು ಮಾಡಲು ಸಲಹೆ ನೀಡುವುದು.

(iv) ಪ್ರಸ್ತುತ ಜಾರಿಯಲ್ಲಿರುವ ನಿವೃತ್ತಿ ಸೌಲಭ್ಯಗಳನ್ನು ಪರಿಶೀಲಿಸುವುದು ಹಾಗೂ ಕಾರ್ಯ ಸಾಧ್ಯವಿರುವ ಬದಲಾವಣೆಗಳನ್ನು ಮಾಡಲು ಸಲಹೆ ನೀಡುವುದು.

(v) ರಾಜ್ಯ ಸರ್ಕಾರವು ವಹಿಸುವ ಇತರೇ ವಿಷಯಗಳನ್ನು ಪರಿಶೀಲಿಸುವುದು.

4. ಅಧಿಕಾರಿ ವೇತನ ಸಮಿತಿಯು ತನ್ನ ಶಿಫಾರಸ್ಸುಗಳನ್ನು ಮಾಡುವಲ್ಲಿ, ರಾಜ್ಯ ಸರ್ಕಾರದ ಸಂಪನ್ಮೂಲಗಳು ಹಾಗೂ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳು ಮತ್ತು ಯೋಜನೆಗಳ ಕುರಿತಾಗಿ ರಾಜ್ಯ ಸರ್ಕಾರದ ಹೊಣೆಗಳು, ಶಾಸನಬದ್ಧ ಮತ್ತು ಕ್ರಮಬದ್ಧ ಕಾರ್ಯಗಳು, ಋಣ ಸೇವಾ ನಿರ್ವಹಣೆಗಳು ಮತ್ತು ವಿತ್ತೀಯ ಹೊಣೆಗಾರಿಕೆ ನಿರ್ವಹಣೆ ಅಧಿನಿಯಮದ ಒಟ್ಟಾರೆ ಅಧಿಕಾರ ವ್ಯಾಪ್ತಿಯೊಳಗೆ ಬರುವ ಅಭಿವೃದ್ಧಿಯೇತರ ಅಗತ್ಯತೆಗಳನ್ನು ಗಮನದಲ್ಲಿರಿಸಬೇಕಾಗುತ್ತದೆ.

5. ಅಧಿಕಾರಿ ವೇತನ ಸಮಿತಿಯು ತನ್ನದೇ ಆದ ಕಾರ್ಯವಿಧಾನಗಳನ್ನು ರೂಪಿಸಿಕೊಳ್ಳುವುದು ಮತ್ತು ಪರಿಶೀಲನಾರ್ಹ ಅಂಶಗಳಿಗಾಗಿ ಅಗತ್ಯವಿರುವ ಮಾಹಿತಿ ಮತ್ತು ದಾಖಲೆಗಳನ್ನು ವಿವಿಧ ಇಲಾಖೆಗಳಿಂದ ತರಿಸಿಕೊಳ್ಳುವುದು.

6. ಸರ್ಕಾರದ ಎಲ್ಲಾ ಇಲಾಖೆಗಳು ಅಧಿಕಾರಿ ವೇತನ ಸಮಿತಿಯು ಬಯಸುವ ಎಲ್ಲಾ ಮಾಹಿತಿ ಮತ್ತು ದಾಖಲೆಗಳನ್ನು ಮತ್ತು ಇತರ ಸಹಾಯವನ್ನು ಒದಗಿಸುವುದು. ಸೇವಾ ಸಂಘಗಳು, ಸ್ಥಳೀಯ ಸಂಸ್ಥೆಗಳು, ಅನುದಾನಿತ ಸಂಸ್ಥೆಗಳು ಮತ್ತು ಇತರ ಸಂಬಂಧಪಟ್ಟವರು ಅಧಿಕಾರಿ ವೇತನ ಸಮಿತಿಗೆ ಪೂರ್ಣ ಸಹಕಾರ ಮತ್ತು ಸಹಾಯವನ್ನು ನೀಡುತ್ತವೆ ಎಂದು ಸರ್ಕಾರವು ನಿರೀಕ್ಷಿಸುತ್ತದೆ.

7. ಅಧಿಕಾರಿ ವೇತನ ಸಮಿತಿಯು ತನ್ನ ವರದಿಯನ್ನು ಒಂಬತ್ತು ತಿಂಗಳೊಳಗಾಗಿ ಸಲ್ಲಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಸುಂದರ ರಾಜ ಗುಪ್ತ)
ಸರ್ಕಾರದ ಉಪಕಾರ್ಯದರ್ಶಿ
ಆರ್ಥಿಕ ಇಲಾಖೆ (ಸೇವೆಗಳು-2)

ಸಂಕಲನಕಾರರು, ಕರ್ನಾಟಕ ಗೆಜೆಟ್, ಮುಂದಿನ ಪ್ರಕಟಣೆಯಲ್ಲಿ ಪ್ರಕಟಿಸುವುದಕ್ಕಾಗಿ ಹಾಗೂ 500 ಪ್ರತಿಗಳನ್ನು ಆರ್ಥಿಕ ಇಲಾಖೆಗೆ ಸರಬರಾಜು ಮಾಡಲು.

**ಇವರಿಗೆ:**

1. ಸರ್ಕಾರದ ಮುಖ್ಯ ಕಾರ್ಯದರ್ಶಿ/ಅಪರ ಮುಖ್ಯ ಕಾರ್ಯದರ್ಶಿಗಳು
2. ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು.
3. ಇಲಾಖಾ ಮುಖ್ಯಾಧಿಕಾರಿಗಳು
4. ಜಿಲ್ಲೆಗಳ ಜಿಲ್ಲಾಧಿಕಾರಿಗಳು.
5. ಪ್ರಾದೇಶಿಕ ಆಯುಕ್ತರು, ಬೆಂಗಳೂರು/ಮೈಸೂರು/ಬೆಳಗಾವಿ/ಗುಲ್ಬರ್ಗ
6. ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
7. ಪ್ರಧಾನ ಮಹಾಲೇಖಪಾಲರು (ಸಿವಿಲ್ ಮತ್ತು ವಾಣಿಜ್ಯ ಲೆಕ್ಕಪರಿಶೋಧನೆ), ಕರ್ನಾಟಕ, ಬೆಂಗಳೂರು.
8. ಮಹಾಲೇಖಪಾಲರು (ಕಂದಾಯ ಸ್ವೀಕೃತಿ ಮತ್ತು ಕಾಮಗಾರಿಗಳು ಮತ್ತು ಅರಣ್ಯ ಲೆಕ್ಕಪರಿಶೋಧನೆ), ಕರ್ನಾಟಕ, ಬೆಂಗಳೂರು.
9. ಮಹಾಲೇಖಪಾಲರು (ಲೆಕ್ಕಗಳು ಮತ್ತು ಹಕ್ಕುಗಳು), ಕರ್ನಾಟಕ, ಬೆಂಗಳೂರು.
10. ರಿಜಿಸ್ಟ್ರಾರ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.
11. ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
12. ರಿಜಿಸ್ಟ್ರಾರ್, ಕರ್ನಾಟಕ ಆಡಳಿತ ನ್ಯಾಯಮಂಡಳಿ, ಬೆಂಗಳೂರು.
13. ಕಾರ್ಯದರ್ಶಿ, ಕರ್ನಾಟಕ ಲೋಕ ಸೇವಾ ಆಯೋಗ, ಬೆಂಗಳೂರು.
14. ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ/ವಿಧಾನ ಪರಿಷತ್ತು, ಬೆಂಗಳೂರು.
15. ಖಜಾನೆ ಅಧಿಕಾರಿ, ರಾಜ್ಯ ಹುಜೂರು ಖಜಾನೆ/ಜಿಲ್ಲಾ ಖಜಾನೆಗಳು.
16. ನಿರ್ದೇಶಕರು, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ವಿಕಾಸ ಸೌಧ, ಬೆಂಗಳೂರು.
17. ಪ್ರಾಜೆಕ್ಟ್ ಆಫೀಸರ್, ಹೆಚ್.ಆರ್.ಎಂ.ಎಸ್., ಕೊಠಡಿ ಸಂಖ್ಯೆ:145'A', ಬಹುಮಹಡಿಗಳ ಕಟ್ಟಡ, ಬೆಂಗಳೂರು.
18. ಕರ್ನಾಟಕ ಸರ್ಕಾರ ಸಚಿವಾಲಯದ ಎಲ್ಲಾ ಶಾಖೆಗಳು.
19. ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಕಬ್ಬನ್ ಉದ್ಯಾನವನ, ಬೆಂಗಳೂರು.
20. ಕರ್ನಾಟಕ ಸರ್ಕಾರ ಸಚಿವಾಲಯದ ಗ್ರಂಥಾಲಯ/ವಿಧಾನ ಮಂಡಲದ ಗ್ರಂಥಾಲಯ.
21. ವಾರಪತ್ರ/ಶಾಖೆಯ ರಕ್ಷಾ ಕಡತ.

**ಕರ್ನಾಟಕ ಸರ್ಕಾರದ ಅಧಿಕೃತ ಅಂತರ್ಜಾಲ ತಾಣ www.finance.kar.nic.in ವೀಕ್ಷಿಸಿ.**